# KANNADA-015

# MARKING SCHEME

# CLASS - X

# 2025 – 2026

**TIME: 3 HOURS** **MARKS: 80**

---

**PART – 1 (40 ಅಂಕಗಳು)**

**SECTION -A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 20 ಅಂಕಗಳು.**

**1. ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 5 X1=5

I. D. ಕೃಷಿ, ಪಶು ಸಾಕಾಣಿಕೆ ಹಾಗೂ ರೇಷ್ಮೆ ಉದ್ಯಮ 1

II. A. ಚಾಮುಂಡೇಶ್ವರಿ 1

III. C. ಕೋಲಾರಮ್ಮ 1

IV. B. ಅಂತರಗಂಗೆ 1

V. D. 2 ನೆಯ ಹೇಳಿಕೆ ಮಾತ್ರ ಸರಿಯಾಗಿದೆ. 1

2.ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5 X1=5

I. D. ಯೋಗಿ, ಆದಿಯೋಗಿ, ಪ್ರಧಾನ ಗುರು, ಆದಿಗುರು 1

II.C. ಪೌರಾಣಿಕ ಸಪ್ತಋಷಿಗಳಿಗೆ 1

III.C. ಮೂರು ಹೇಳಿಕೆಗಳು ಸರಿಯಾಗಿವೆ. 1

IV. C. ಸಿಂಧೂ ಸರಸ್ವತಿ ಕಣಿವೆಯ 1

V. A. ಆದಿಸ್ವರೂಪ 1

3. ಕೆಳಗೆ ಕೊಟ್ಟಿರುವ ದೇವನೂರು ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಎಂಬ ಪಾಠವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 5x1=5

I. ಡಾ. ಅಶೋಕ ಪೈ ಅವರು ಯಾವ ಸಂಶೋಧನಾ ಸತ್ಯವನ್ನು ಹೇಳಿದರು?

ಉತ್ತರ; ಡಾ. ಅಶೋಕ ಪೈ ಅವರು ಮನಸ್ಸಿನ ಬಗ್ಗೆ ಸಂಶೋಧನಾ ಸತ್ಯವನ್ನು ಹೇಳಿದರು . 1

II. ಕೊಲೆ ದೃಶ್ಯವನ್ನು ನೋಡುತ್ತಿದ್ದವರ ಮನಸ್ಸಿನಲ್ಲಿ ಯಾವ ಭಾವನೆ ಉಂಟಾಗುತ್ತದೆ?

ಉತ್ತರ: ಕೊಲೆ ದೃಶ್ಯವನ್ನು ನೋಡುತ್ತಿದ್ದವರ ಮನಸ್ಸಿನಲ್ಲಿ ದುಃಖದ ಭಾವನೆ ಉಂಟಾಗುತ್ತದೆ. 1

III. ಟೆಲಿವಿಷನ್ ನೋಡುತ್ತಿದ್ದವರಿಗೆ ಖುಷಿ ಭಾವನೆ ಯಾವಾಗ ಉಂಟಾಗುತ್ತದೆ?

ಉತ್ತರ: ಟೆಲಿವಿಷನ್ ನೋಡುತ್ತಿದ್ದವರಿಗೆ ನೃತ್ಯದ ದೃಶ್ಯ ಬಂದಾಗ ಖುಷಿ ಭಾವನೆ ಉಂಟಾಗುತ್ತದೆ. 1

IV. ಲೇಖಕರ ಪ್ರಕಾರ ಬುದ್ಧನ ಕಾರುಣ್ಯ ಎಲ್ಲಿಂದ ಮೂಡಿರಬಹುದು?

ಉತ್ತರ: ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ, ಎಲ್ಲಾ ಜೀವಿಗಳು ಪರಿಸರದಲ್ಲಿ ಉಸಿರಾಡುತ್ತ ಕಂಪನ ಉಂಟು ಮಾಡುತ್ತಿರುತ್ತವೆ ಎಂಬ ಅನುಕಂಪನದಿಂದ ಕಾರುಣ್ಯ ಮೂಡಿರಬಹುದು. 1

V. ಮನುಷ್ಯರು ಏನನ್ನು ಎಚ್ಚರಗೊಳಿಸಬೇಕು?

ಉತ್ತರ: ಮನುಷ್ಯ ತಮ್ಮೊಳಗಿರುವ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕು. 1

4. ಈ ಕೆಳಗೆ ಕೊಟ್ಟಿರುವ ಕುವೆಂಪು ಅವರು ಬರೆದಿರುವ 'ಹಸುರು' ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 5X1 =5

I. ಕವಿಗೆ ಯಾವುವು ಹಸುರಾಗಿ ಕಾಣುತ್ತದೆ?

ಉತ್ತರ: ಕವಿಗೆ ಆಗಸ,ಮುಗಿಲು ಗದ್ದೆಯ ಬಯಲು ,ಹಸುರಿನ ಮಲೆ, ಕಣಿವೆ , ಸಂಜೆಯ ಬಿಸಿಲು ಹಸಿರಾಗಿ ಕಾಣಿಸುತ್ತದೆ. 1

II. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?

ಉತ್ತರ: ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ. 1

III. ಕವಿಗೆ ಹಸುರು ಹುಲ್ಲು ಹೇಗೆ ಕಾಣುತ್ತದೆ?

ಉತ್ತರ: ಕವಿಗೆ ಹಸುರು ಹುಲ್ಲು ಮಕಮಲ್ಲಿನ ಜಮಖಾನೆಯಂತೆ ಕಾಣುತ್ತದೆ. 1

IV. ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಹೇಗೆ ಕಾಣುತ್ತದೆ?

ಉತ್ತರ:ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಗಿಳಿಯ ಬಣ್ಣದಂತೆ ಕಾಣುತ್ತದೆ. 1

V. ಹಸುರು ಪದ್ಯವನ್ನು ಬರೆದ ಕವಿ ಯಾರು?

ಉತ್ತರ: ಹಸುರು ಪದ್ಯವನ್ನು ಬರೆದ ಕವಿ ಕುವೆಂಪು. 1

## SECTION -B

**(ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) = 20 ಅಂಕಗಳು.**

A. **5. ಕೆಳಗಿನ ಪ್ರತಿಯೊಂದು ಬಹು ಆಯ್ಕೆ ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** 10X1=10

I. D. a-2 b-4 c-1 d-5 1

II. B. 2 ಮತ್ತು 4 1

III. B. ಸಪ್ತಮೀ 1

IV. B. ಉತ್ತಮ ಪುರುಷ ಸರ್ವನಾಮ 1

V. D. ನೋಡು 1

VI. D.ಹಳಸಲು-ಮಾಸ 1

VII. A. ಭೂಮಿ 1

VIII. B.ಗುಣ 1

IX. A. 1 ಮತ್ತು 2 1

X. D.ತಿಂಡಿ - ತಿನಿಸು 1

6. I. ತಾಯಿ ಮಗುವನ್ನು ನೋಡಲು ತೊಟ್ಟಿಲ ಕಡೆ ಬಾಗುತ್ತಿದ್ದಾಳೆ/ಬಾಗುತ್ತಾಳೆ.. 1

II. ಮಕ್ಕಳು ಮನೆಯಲ್ಲಿ ಸುಮ್ಮನೆ ಇರುವುದಿಲ್ಲ ಗಲಾಟೆ ಮಾಡುತ್ತಾರೆ. 1

III. ಹುಡುಗರು ಮಳೆ ಬರುವಾಗ ಆಟವಾಡರು - ಈ ವಾಕ್ಯವನ್ನು ನಿಷೇಧಾರ್ಥಕ ರೂಪದಲ್ಲಿ ಬರೆಯಿರಿ. 1

IV.'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ಅರ್ಥ- ಒಂದು ಕೆಲಸವನ್ನು ಮಾಡಲು ಹೆಚ್ಚು ಸಮಯ ಬೇಕು ಹಾಳು ಮಾಡಲು ಒಂದು ಕ್ಷಣ ಸಾಕು.

ಅಥವಾ 1

'ಕೂಡಿ ಬಾಳಿದರೆ ಸ್ವರ್ಗಸುಖ'ಅರ್ಥ- ಒಟ್ಟಿಗೆ ಬಾಳಿದರೆ ನಮ್ಮೆಲ್ಲರ ಜೀವನ ಸುಖಮಯವಾಗಿರುತ್ತದೆ.(ಮಕ್ಕಳ ಆಲೋಚನೆ ತಕ್ಕಂತೆ ಅಂಕಗಳನ್ನು ನೀಡಬೇಕು)

V. ನೋವನ್ನು ಉಂಟು ಮಾಡುವುದು(ಗಾಯ ಮಾಡುವುದು) ಈ ಅರ್ಥದಲ್ಲಿ ಬರೆದಿದ್ದರೆ ಮಕ್ಕಳ ಆಲೋಚನೆ ತಕ್ಕಂತೆ ಅಂಕಗಳನ್ನು ನೀಡಬೇಕು. 1

5X1=5

7. I. A. ಚಲವಲನ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕ್ರಿಯಾ ಸ್ವಾತಂತ್ರ್ಯ 1

II. B. ಬರೆವಣಿಗೆಯನ್ನು ತಿದ್ದಿಕೊಳ್ಳಬೇಕೆಂಬುದು 1

III. A. ಭಗತ್ ಸಿಂಗ್ ನ ಸ್ವಾತಂತ್ರ್ಯ ಪ್ರೇಮವನ್ನು ನೆನಪಿಸುತ್ತದೆ. 1

IV. D. 4 ಮಾತ್ರ ಸರಿ 1

V. C. ಚಂದನ, ಸುವರ್ಣ, ಕಬ್ಬು 1

## PART – 2 (40-ಅಂಕಗಳು)

## SECTION -C

### (ಬರವಣಿಗೆ ಕೌಶಲ್ಯ) = 12 ಅಂಕಗಳು

8.ಪತ್ರಲೇಖನ 4

- ಇಂದ - ½
- ಅವರಿಗೆ - ½
- ದಿನಾಂಕ, ಸ್ಥಳ- ½
- ಮಾನ್ಯರೇ, ವಿಷಯ- ½
- ಪತ್ರದ ಒಡಲು - 1½
- ತಮ್ಮ ವಿಶ್ವಾಸಿ - ½

ಅಥವಾ

- ಇಂದ - ½
- ಅವರಿಗೆ - ½
- ದಿನಾಂಕ, ಸ್ಥಳ- ½
- ವಿಷಯ, ಉಲ್ಲೇಖ- ½
- ಸ್ವ-ವಿವರ - 1½
- ತಮ್ಮ ವಿಶ್ವಾಸಿ - ½

9. ವರದಿ 4

- ಶೀರ್ಷಿಕೆ – ½
- ಸ್ಥಳ ½
- ದಿನಾಂಕ - ½
- ವರದಿಯ ಒಡಲು --- 2
- ವರದಿಗಾರರ ರುಜು - - ½

10. ಪ್ರಬಂಧ 4

- ಪೀಠಿಕೆ -- 1
- ವಿಷಯ ವಿವರಣೆ - 2
- ಉಪಸಂಹಾರ/ಮುಕ್ತಾಯ - 1

**(ಪಠ್ಯಗಳ ಅಧ್ಯಯನ) =28 ಅಂಕಗಳು**

11. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. 4X2=8

I. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು? 2

ರಾಮನು ಗಿರಿವನಗಳನ್ನು ಕುರಿತು " ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು .ನನ್ನ ಪ್ರೀತಿಯರಾಣಿ ಸೀತೆಯು ನನಗೆ ದೊರೆಯುವಳೇ ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ ' ಎಂದು ಪ್ರಾರ್ಥಿಸಿದನು .

II. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು? 2

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು , ಕಂಬನಿಯು ರಭಸದಿಂದ ಮುಂದೆ ಬಂದು , ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ " ಅಯ್ಯೋ , ದುರ್ಯೋಧನನಿಗೆ ಕೇಡಾಯಿತು " ಎಂದನು . ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ ಸುಮ್ಮನೆ ಹೋಗುವುದೆ . ಕೃಷ್ಣನು " ನನ್ನವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು " ಎಂದು ಮನದಲ್ಲಿ ನೊಂದುಕೊಂಡನು .

III. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು? 2

ಉತ್ತರ: ಅರಿಯದವರೊಡನೆ ಸಂಗವ ಮಾಡಿದಡೆ ಕಲ್ಲ ಹೊಡೆದು ಕಿಡಿಯನ್ನು ತೆಗೆದುಕೊಂಡಂತೆ ಆಗುತ್ತದೆ.

IV. ಪುಟ್ಟಿಯ ಪ್ರಶ್ನೆಗಳೇನು?

ವಸಂತನು ಗುಡಿಸಲೊಳಗೆ ಬರಲು ಹೆದರಿದನೆ? ಮತ್ತು ಹರಿದ ಚಿಂದಿ ಬಟ್ಟೆಗಳನ್ನು ಕಂಡು ವಸಂತನು ಮರುಗಿದನೆ? ಎಂದು ಪುಟ್ಟಿಯು ಪ್ರಶ್ನಿಸಿದಳು. 2

12. 3 X2=6

I. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

. **ಉತ್ತರ:** ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆಗೆ ಹಾಯುತ್ತಿಲ್ಲ. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ

ಪಾಲಿಸಲಾಗುತ್ತಿದೆ. ಇಂತಹ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನೆಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.

II. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.? 3

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು , ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು . ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು . ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು .

13. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಹಾಗೂ ಸ್ವಾರಸ್ಯದೊಡನೆ ವಿವರಿಸಿ. 3X2= 6

I."ಸಾಮಾಜಿಕ ಕಾನೂನುಗಳ ಹರಿಕಾರ" 3

ಆಯ್ಕೆ : - ಈ ವಾಕ್ಯವನ್ನು ' ಭಾಗ್ಯಶಿಲ್ಪಿಗಳು ' ಗದ್ಯದಲ್ಲಿರುವ ಪಠ್ಯಪುಸ್ತಕ ಸಮಿತಿಯು ಸಂಗ್ರಹಿಸಿ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರು " ಭಾಗದಿಂದ ಆರಿಸಿಕೊಳ್ಳಲಾಗಿದೆ .

ಸಂದರ್ಭ : - ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ . ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣ ಮಾಡಿದರು . ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು . ' ಸಾಮಾಜಿಕ ಕಾನೂನುಗಳ ಹರಿಕಾರ ' ಎಂದು ಹೆಸರಾದರು , ಸಾಹಿತ್ಯ , ಸಂಗೀತ , ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು .

ಸ್ವಾರಸ್ಯ : - ಸ್ವತಃ ರಾಜರಾಗಿ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ತಂದು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದ ಒಡೆಯರಿಗೆ ಈ ಬಿರುದು ನೀಡಿರುವುದು ಒಪ್ಪುವಂತಾದ್ದಾಗಿದೆ

ಅಥವಾ

"ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು" 3

ಉತ್ತರ: ಈ ವಾಕ್ಯವನ್ನು ಶ್ರೀ ಎ.ಎನ್. ಮೂರ್ತಿರಾವ್ ಅವರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ."ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿ ಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ..

II. ಜೀವ ಸತ್ತು ಹೋಗುವುದು ಗೊತ್ತ" 3

ಆಯ್ಕೆ : -ಈ ವಾಕ್ಯವನ್ನು ಡಾ . ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ ' ಕನ್ನಡ ಜನಪದ ಗೀತೆಗಳು ' ಕೃತಿಯಿಂದ ಆಯ್ದ ' ಹಲಗಲಿಯ ಬೇಡರು ' ಎಂಬ ಲಾವಣಿಯಿಂದ ಆರಿಸಲಾಗಿದೆ

ಸಂದರ್ಭ : - ಬ್ರಿಟಿಷರ ಆಜ್ಞೆಯನ್ನು ಹೊರಡಿಸಿ , ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ , ಬ್ಯಾಡರ ಬಾಲ , ಜಡಗ , ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ , ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ .

ಸ್ವಾರಸ್ಯ : - ಹಲಗಲಿಯ ಬೇಡರು " ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು " ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ .

**ಅಥವಾ**

“ಪ್ರೀತಿಯ ಹಣತೆಯ ಹಚ್ಚೋಣ” 3

ಆಯ್ಕೆ :- ಈ ವಾಕ್ಯವನ್ನು ಕವಿ ‘ಜಿ.ಎಸ್. ಶಿವರುದ್ರಪ್ಪ’ ಅವರು ರಚಿಸಿರುವ ‘ಎದೆತುಂಬಿ ಹಾಡಿದೆನು’ಕವನ ಸಂಕಲನದಿಂದ ಆಯ್ದ ‘ಸಂಕಲ್ಪಗೀತೆ’ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ :- ಮಾನವರ ದುರ್ವರ್ತನೆಯಿಂದ ಕಲುಷಿತವಾಗಿರುವ ನದೀಜಲಗಳ ಶುದ್ಧೀಕರಣ ಹೇಗಾಗಬೇಕೆಂಬ ಭಾವ ಕವಿಯ ಮನದಲ್ಲಿ ಮೂಡಿದಾಗ ಮುಂಗಾರಿನ ಮಳೆಯಾಗಿ ಕಲ್ಮಶಗಳನ್ನು ಕೊಚ್ಚಿಕೊಂಡು ಹೋಗಬೇಕು , ಬರಡಾಗಿರುವ ಕಾಡು-ಮೇಡುಗಳಿಗೆ ವಸಂತವಾಗಬೇಕೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :- ಮುಂಗಾರಿನ ಮಳೆ ಕಲ್ಮಶಗಳನ್ನು ಕೊಚ್ಚಿಕೊಂಡು ಹೋದಂತೆ ಹೊಸಸಂಕಲ್ಪ ಜನರ ಮನದ ಕಲ್ಮಶಗಳನ್ನು ಕಳೆದು ಬದುಕನ್ನು ಸಮೃದ್ಧವಾಗಿಸಬೇಕು ಎಂದು ಕವಿ ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

14. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 1X4=4

I. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಮೈಸೂರು ಸಂಸ್ಥಾನದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು.1913ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣದಿಂದ ಪ್ರೌಢ ಶಿಕ್ಷಣ ಶಾಲೆಗಳನ್ನು ಬಿಡುಗಡೆಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಸಂಸ್ಥಾನವೇ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆಯನ್ನು ನಡೆಸುವ ವ್ಯವಸ್ಥೆ ಮಾಡಿದರು. ಮಹಿಳೆಯರಿಗಾಗಿ ಗೃಹ ಶಿಕ್ಷಣ ಶಾಲೆಗಳನ್ನು ಮತ್ತು ಗ್ರಂಥಾಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿವೇತನಗಳನ್ನು ನೀಡುವ ಮೂಲಕ ಹಿಂದುಳಿದ ವರ್ಗಗಳ ವ್ಯಾಸಂಗಕ್ಕೆ ಅವಕಾಶ ಮಾಡಿದರು. ನೇಮಕಾತಿಯಲ್ಲಿ ಸ್ಥಳಿಯರಿಗೆ ಆದ್ಯತೆ ನೀಡಿದರು. ಶಿಕ್ಷಣದಲ್ಲಿ ಸುಧಾರಣೆ ತಂದರು. ಕನ್ನಡ ಸಾಹಿತ್ಯ ಪರಿಷತ್‌ನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಸಾರ್ವಜನಿಕ ಜೀವ ವಿಮಾ ಯೋಜನೆಯನ್ನು ಜಾರಿಗೆ ತಂದರು. ವಿಶ್ವೇಶ್ವರಯ್ಯ ಅವರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು. ಇದಕ್ಕಾಗಿ ಮೈಸೂರು ಬ್ಯಾಂಕ್, ಉಳಿತಾಯ ಬ್ಯಾಂಕ್ಗಳು ಅಸ್ತಿತ್ವಕ್ಕೆ ಬಂದವು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಕೈಗಾರಿಕಾ ಹೂಡಿಕೆ, ಅಭಿವೃದ್ಧಿ ನಿಧಿಗಳನ್ನು ರಚಿಸಿದರು. ಸಾರ್ವಜನಿಕ ಜೀವ ವಿಮಾ ಯೋಜನೆಯನ್ನು ಜಾರಿಗೆ ತಂದರು.

ಅಥವಾ

ಶಬರಿಯ ಚಿಂತೆ ಹಿಂಗಿ ಹೋದ ಸ್ವಾರಸ್ಯವನ್ನು ವಿವರಿಸಿ. 4

ಉತ್ತರ: ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ. ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನೂ ಕೂಡ “ನಿನ್ನ ಆದರದಿಂದ ನಾವು ಸುಖಿ , ನಿನಗೆ ನಾವು ಋಣಿ ” ಎನ್ನುತ್ತಾನೆ . ಶಬರಿಯು ಕಣ್ಣೀರು ತುಂಬಿಕೊಂಡು “ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗಿತೇ? ನಾನೊಬ್ಬಳು ಬಡವಿ, ನನ್ನ ಮೇಲೆ ಮರುಕ ತೋರಿದಿರಾ?” ಎನ್ನುತ್ತಾಳೆ. ಶ್ರೀರಾಮನು “ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ. ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮಮನೆ, ನೀನೇ ತಾಯಿಯಂತೆ ” ಎನ್ನುತ್ತಾನೆ . ಶಬರಿಯು “ ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ , ನಾನು ಧನ್ಯಳಾದ ಸಿದ್ಧ ಮತಂಗರ ವರ ನನಗೆ ಫಲಿಸಿತು. ನಿಮ್ಮನ್ನು ಕಂಡು ಪುಣ್ಯವು ತುಂಬಿತು. ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು” ಎನ್ನುತ್ತಾಳೆ. ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ “ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿ ನೀನು ಶುದ್ಧ ಪ್ರೇಮಮೂರ್ತಿಯಾಗಿದ್ದೀಯೆ. ಈ ದಿನ ನಮಗೆ ಸುದಿನ” ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ.

15. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 1X4=4

I.ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ? 4

ನಮ್ಮ ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ನಮ್ಮ ಜೀವನವೆಂಬ ಹಡಗಿನ

ಸುತ್ತಮುತ್ತಲು ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯೆಂಬ ಅರಿವಿನ(ತಿಳುವಳಿಕೆಯ)ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಜ್ಞಾನಯೆಂಬ ಹಣತೆಯ ಮೂಲಕ ಎಚ್ಚರಿಕೆಯಿಂದ ಗುರಿಯತ್ತ ಮುನ್ನಡೆಸುವ ಸಂಕಲ್ಪ ಕೈಗೊಳ್ಳಬೇಕು. ವಸಂತಕಾಲದ ಆಗಮನ ಬರಡಾಗಿರುವ ಕಾಡು-ಮೇಡುಗಳಲ್ಲಿ ಮರಗಿಡಗಳು ಸಮೃದ್ಧವಾಗಿ ಚಿಗುರಿ ಪ್ರಕೃತಿಗೆ ನವಚೈತನ್ಯವನ್ನು ತಂದುಕೊಡುವ ಹಾಗೇಯೇ ಕಲುಷಿತವಾಗಿರುವ ಮನಸ್ಸುಗಳನ್ನು ಹಸನುಗೊಳಿಸಬೇಕು. ಶೋಷಣೆಗೂಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ.ಅವುಗಳನ್ನು ಕೆಡವಿ, ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗುವ ಸಂಕಲ್ಪ ಕೈಗೊಳ್ಳಬೇಕು. ಮತಪಂಥಗಳೆಲ್ಲವೂ ಸಾಧನೆಯ ದಾರಿಗಳು, ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾನಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು. ¨ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ಸಮಾಜವನ್ನು ಸ್ವಾಸ್ಥ್ಯದ ನೆಲೆಯಾಗಿಸುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

ಅಥವಾ

ಕರ್ಣನಿಗೆ ಶ್ರೀಕೃಷ್ಣನು ನೀಡಿದ ಆಮಿಷಗಳೇನು? ವಿವರಿಸಿ

ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ, ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ್ತ ಕರ್ಣನ ಜನ್ಮವೃತ್ತಾಂತವನ್ನು ಹೇಳಿದ ಕೃಷ್ಣನು 'ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವವು. ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು. ಎಡಭಾಗದಲ್ಲಿ ಕೌರವೇಂದ್ರರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ, ಮಾಗಧ, ಯಾದವಾದಿಗಳು, ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ಸೊಬಗನ್ನು ತೊರೆದು, ದುರ್ಯೋಧನ ಹೇಳಿದ ಮಾತಿಗೆಲ್ಲಾ ಒಡೆಯ ಪ್ರಸಾದ, ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?" ಎಂದು ಆಮಿಷ ಒಡ್ಡಿದನು.

*************************************************************************